೩.	ಅಂಕೋಲ	೧	೩	೧೦
೪.	ಸಿರ್ಸಿ	೧	೬	೨೨೧
೫.	ಕುಮಟಾ	೧	೧	೧೩
೬.	ಹಳಿಯಾಳ	-	೧	೧೭೬
೭.	ಮುಂಡಗೋಡ	-	೩	೧೪೮
೮.	ಸಿದ್ದಾಪುರ	-	-	೧೭೪
೯.	ಯಲ್ಲಾಪುರ	-	೨	೪೦
೧೦.	ಭಟ್ಕಳ	-	-	೧೦
೧೧.	ಜೋಯ್ಡಾ (ಸೂಪಾ)	-	೪	೩೮
	ಒಟ್ಟು	೧೫	೩೫	೯೫೨

ಕನ್ನಡ ಸಾಹಿತ್ಯ ಪರಿಷತ್ತಿನ ನೌಕರರಿಗೆ ಕೊಡತಕ್ಕ ಸೌಲಭ್ಯಗಳು

೩೯೪ (೨೧೯೨) ಶ್ರೀ ಎ. ಟಿ. ರಾಮಸ್ವಾಮಿ (ಆರಕಲಗೂಡ್):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;

ಅ) ಕನ್ನಡ ಸಾಹಿತ್ಯ ಪರಿಷತ್ತಿನ ನೌಕರರ ಸಂಬಳ ಮತ್ತು ಸೇವಾ ಸೌಲಭ್ಯಗಳು ತುಂಬಾ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ನೌಕರರ ಸಂಬಳ ಹಾಗೂ ಸೇವಾ ಸೌಲಭ್ಯ ಹೆಚ್ಚಿಸುವ ಸಲುವಾಗಿ ಹೆಚ್ಚುವರಿ ಅನುದಾನದ ಬಗ್ಗೆ ಬೇಡಿಕೆಯು ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಬಂದಿರುತ್ತದೆ?

ಈ) ಅದನ್ನು ಈಡೇರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರಿಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಬಂದಿದೆ

ಇ) ಹೆಚ್ಚುವರಿ ಅನುದಾನದ ಅಂದಾಜಿನೊಂದಿಗೆ ಬೇಡಿಕೆ ಇತ್ತೀಚೆಗೆ ಬಂದಿದೆ.

ಈ) ಪರಿಶೀಲನೆಯಲ್ಲಿದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ವಿದೇಶಿ ಸಂಸ್ಥೆಯಿಂದ ಪ್ರಸ್ತಾವನೆ

೩೯೫ (೨೧೫೬) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;